**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.

ಸಿ.ಸಿ. ನಂ. : 897/2016 ದಿನಾಂಕಃ 30-01-2024
ಸಿ ಡಬ್ಲೂ : 6
ಪಿ ಡಬ್ಲೂ : 6

---

:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:

| | |
|---|---|
| ಸಾಕ್ಷಿದಾರನ ಹೆಸರು | ವಾಸುದೇವ ಶಂಕರ ಕಾಂಬಳೆ |
| ಗಂಡ/ ತಂದೆಯ ಹೆಸರು | ಶಂಕರ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | ಸಾಃ ಅಥಣಿ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ

ನಾನು 2012 ರಿಂದ 2016 ರವರೆಗೆ ಅಬಕಾರಿ ಉಪನಿರೀಕ್ಷಕರು ಎಂದು ಅಥಣಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14.12.2015 ರಂದು ಚಾಸಾ-5 ರವರಿಂದ ಕಡತವನ್ನು ಪಡೆದುಕೊಂಡು ಪ್ರಕರಣಕ್ಕೆ ಸಂಬಂದಿಸಿದಂತೆ ಮುಂದಿನ ತನಿಖೆಯನ್ನು ವಹಿಸಿಕೊಂಡಿರುತ್ತೇನೆ. ಚಾಸಾ-4 ರವರಿಂದ ದಿಃ 29.09.2016 ರಲ್ಲಿ ಚಾಸಾ-4 ರವರು ಮುದ್ದೆಮಾಲನ್ನು ರಾಸಾಯನಿಕ ಪರೀಕ್ಷಗೆ ತೆಗೆದುಕೊಂಡು ಹೋಗಲು ನೇಮಕಮಾಡಿ ಅವರು ಒಂದು ಲಿಖಿತ ಅರ್ಜಿ ಹಾಗೂ ಮುದ್ದೆಮಾಲನ್ನು ಕಳುಹಿಸಿಕೊಟ್ಟಿರುತ್ತೇನೆ. ಆಬಗ್ಗೆ ಮನವಿ ಪತ್ರದ ಕಛೇರಿ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಚಾಸಾ-3 ರವರ ಹೇಳಿಕೆ ಪಡೆದಿರುತ್ತೇನೆ. ಆ ನಂತರ ದಿಃ 04.03.2016 ರಂದು ಎಫಎಸಎಲ ವರದಿಯನ್ನು ಪಡೆದುಕೊಂಡು ಚಾಸಾ-4 ರವರು ನನಗೆ ಹಸ್ತಾಂತರಿಸಿರುತ್ತಾರೆ. ಸದರಿ ಹೇಳಿಕೆ ಪತ್ರವನ್ನು ದಿಃ 14.05.2016 ರಂದು ಪಡೆದುಕೊಂಡಿರುತ್ತೇನೆ. ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿತರ ವಿರುದ್ಧ ದಿಃ 13.06.2016 ರಲ್ಲಿ ಅಂತಿಮ ವರದಿ ಸಲ್ಲಿಸಿದ್ದು ಅದನ್ನು ನಿಪಿ-6 ಎಂದು, ನಿಪಿ-6 ರಲ್ಲಿರುವ ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಎಫಐಅರ ಪ್ರತಿಯನ್ನು ನಿಪಿ-7 ಎಂದು

ಗುರುತಿಸಲಾಯಿತು. ಮುಮಾ1 ಹಾಗೂ 2 ನೋಡಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **K H A.**ವಕೀಲರಿಂದಃ</u>

ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಯಾವ ದಿನಾಂಕದಂದು ಹೋಗಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನನ್ನ ಅಂತಿಮ ವರದಿಯಲ್ಲಿ ಘಟನಾ ಸ್ಥಳಕ್ಕೆ ಹೋಗಿರುವ ಬಗ್ಗೆ ನಮೂದು ಮಾಡಿಲ್ಲ. ಸ್ಯಾಂಪಲನ್ನು ಪರೀಕ್ಷೆಗಾಗಿ ಪ್ರಕರಣ ದಾಖಲಾದ ತಕ್ಷಣವೇ ಪರೀಕ್ಷೆಗೆ ಕಳಿಸಿಕೊಡಬೆಕೆಂದು ನಿಯಮಗಳಿರುತ್ತವೆ. ಪ್ರಕರಣಕ್ಕೆ ಸಂಬಂಸಿದಂತೆ ದಿಃ 14.02.2015 ರಲ್ಲ್ ಜಪ್ತಿ ಮಾಡಿಕೊಂಡಿರುತ್ತೇವೆ ಮತ್ತು ದಿಃ 29.02.2016 ರಂದು ಕಳಿಸಿರುತ್ತೇವೆ. ಪ್ರಕರಣದಲ್ಲಿ ಸುಮಾರು ಎರಡುವರೆ ತಿಂಗಳ ನಂತರ ಕಳಿಸಿರುತ್ತೇವೆ ಎಂದರೆ ಸರಿ. ನನ್ನ ಅಂತಿಮವರದಿಯಲ್ಲಿ ಸಿಬ್ಬಂದಿ ವರ್ಗದವರ ಕೊರತೆ ಇದ್ದ ಕಾರಣ ತಡವಾಗಿ ಪರೀಕ್ಷೆಗೆ ಕಳಿಸಿರುತ್ತೇನೆಂದು ನಮೂದು ಮಾಡಿಲ್ಲ. ಮುಮಾ1 ಹಾಗೂ 2 ಟೆಟ್ರಾಪ್ಯಕೇಟಗಳು ಖಾಲಿ ಇರುತ್ತವೆ ಎಂದರೆ ಸರಿ. ಮುಮಾ1 ಹಾಗೂ2 ಟೆಟ್ರಾಪ್ಯಕೇಟಗಳು ಸಾಮಾನ್ಯವಾಗಿ ಸಾರಾಯಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಸ್ಯಾಂಪಲ ಪರೀಕ್ಷೆಗೆ ಕಳಹಿಸಿಕೊಟ್ಟು ವರದಿ ಬಂದ ನಂತರ ಆರೋಪಿತರ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ರವರ ಹೇಳಿಕೆ ಪಡೆದಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು , ಚಾಸಾ-5 ರವರು ಒಂದೇ ವರ್ಗದವರು ಎಂದರೆ ಸರಿ. ಅವರಿಗೆ ನೀಡಿದ ಪಿರ್ಯಾದಿಗೆ ಅನೂಕುವಾಗಲೀ ಎಂದು ಆರೋಪಿತನ ವಿರುದ್ಧ ಖೊಟ್ಟಿ ದೂರನ್ನು ಸಲ್ಲಿಸಿರುತ್ತೇನೆ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.